ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಮಂತ್ರಾಲಯ ರಸ್ತೆ, ಯರಗೇರಾ-584133, ರಾಯಚೂರು, ಕರ್ನಾಟಕ
ಆಡಳಿತ ವಿಭಾಗ E-mail: registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2025-26/2557 ದಿನಾಂಕ: 22/01/2026

ವಿಷಯ : ದಿನಾಂಕ 22.01.2026 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಕಳಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 22.01.2026 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ದಿನಾಂಕ: 22.01.2026 ರಂದು ಗುರುವಾರ ಬೆಳಗ್ಗೆ 11.00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು/ಸದಸ್ಯರು**

| | | |
|---|---|---|
| 1. | ಪ್ರೊ. ಶಿವಾನಂದ ಕೆಳಗಿನಮನಿ | : ಅಧ್ಯಕ್ಷರು |
| 2. | ಪ್ರೊ. ಪಾರ್ವತಿ ಸಿ. ಎಸ್, (ಡೀನರು) | : ಸದಸ್ಯರು |
| 3. | ಪ್ರೊ. ಪಿ. ಭಾಸ್ಕರ್, (ಡೀನರು) | : ಸದಸ್ಯರು |
| 4. | ಡಾ. ವೆಂಕಟೇಶ.ಕೆ (ಡೀನರು) | : ಸದಸ್ಯರು |
| 5. | ಡಾ. ಸುಯಮೀಂದ್ರ ಕುಲಕರ್ಣಿ (ಡೀನರು) | : ಸದಸ್ಯರು |
| 6. | ಡಾ. ಲತಾ ಎಂ.ಎಸ್, (ಡೀನರು) | : ಸದಸ್ಯರು |
| 7. | ಶ್ರೀಮೋಹನ್ ಬಲ್ಲಿದವ್ ತಂದೆ ಮಾನಪ್ಪ | : ಸದಸ್ಯರು |
| 8. | ಶ್ರೀ ಥಾಮಸ್ ಬೆಂಜಮಿನ್ | : ಸದಸ್ಯರು |
| 9. | ಶ್ರೀ ಸುಶೀಲ್ ಕುಮಾರ್ ತಂದೆ ಮಲ್ಲಯ್ಯ | : ಸದಸ್ಯರು |
| 10. | ಶ್ರೀ. ಅನಿಲಕುಮಾರ ರಾಜಣ್ಣ | : ಸದಸ್ಯರು |
| 11. | ಶ್ರೀ ರಮೇಶ ತಂದೆ ಸತ್ಯಪ್ಪ | : ಸದಸ್ಯರು |
| 12. | ಡಾ. ಯಂಕಣ್ಣ | : ಸದಸ್ಯರು |
| 13. | ಡಾ. ಸಿದ್ದಪ್ಪ | : ಸದಸ್ಯರು (ಆನ್‌ಲೈನ್) |
| 14. | ಡಾ. ಎಮ್ ವಾರಿಸ್ | : ಸದಸ್ಯರು |
| 15. | ಶ್ರೀ. ಪರ್ವತರೆಡ್ಡಿ | : ಸದಸ್ಯರು |
| 16. | ಡಾ. ಚನ್ನಬಸಪ್ಪ ಮೇಟಿ | : ಸದಸ್ಯರು |
| 17. | ಡಾ. ಈರಣ್ಣ. ಪೂಜಾರಿ | : ಸದಸ್ಯರು |
| 18. | ಶ್ರೀ. ಸತ್ಯನಾರಾಯಣ ಶ್ರೇಷ್ಠಿ | : ಸದಸ್ಯರು |
| 19. | ಡಾ. ಈರಣ್ಣ. ಜೆ | : ಸದಸ್ಯರು |
| 20. | ಶ್ರೀ. ಶೇಖಪ್ಪ. ಬಿ. ರ‍್ಯಾಖಾ | : ಸದಸ್ಯರು |
| 21. | ಡಾ. ಜಿ.ಎಸ್.ಬಿರಾದಾರ, ಗ್ರಂಥಪಾಲಕರು | : ಸದಸ್ಯರು |
| 22. | ಶ್ರೀಮತಿ. ಗಾಯಿತ್ರಿ ಕೆ.ಎಸ್.ಎ.ಎಸ್ ಹಣಕಾಸು ಅಧಿಕಾರಿಗಳು | : ಸದಸ್ಯರು |
| 23. | ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 24. | ಡಾ. ಎ. ಚನ್ನಪ್ಪ ಕೆ.ಎ.ಎಸ್. ಕುಲಸಚಿವರು | : ಸದಸ್ಯ ಕಾರ್ಯದರ್ಶಿಗಳು |

ಕುಲಪತಿಗಳು/ವಿದ್ಯಾವಿಷಯಕ ಪರಿಷತ್ ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯ ಕಾರ್ಯಸೂಚಿಯ ಪ್ರಕಾರವಾಗಿ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ (1) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ 2026–27ನೇ ಸಾಲಿನ ಸಂಲಗ್ನತೆ ಕುರಿತು ಚರ್ಚೆ.

**ಚರ್ಚೆ:**

ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ 2026-27ನೇ ಸಾಲಿನ ಸಂಲಗ್ನತೆ ಕುರಿತು ವಿವರಗಳನ್ನು ಈ ಕೆಳಗಿನಂತೆ ಸಭೆಗೆ ವಿವರಿಸಿದ್ದರು.

1. ಆದಿಕವಿ ಶ್ರೀ ಮಹರ್ಷಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವಂತಹ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಒಟ್ಟು 183 ಮಹಾವಿದ್ಯಾಲಯಗಳು ಅರ್ಜಿ ಸಲ್ಲಿಸಿರುತ್ತವೆ.
2. 45 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅರ್ಹತೆ ಹೊಂದಿರುವ ಒಟ್ಟು ಮಹಾವಿದ್ಯಾಲಯಗಳು 167.
3. 45 ಕ್ಕಿಂತ ಕಡಿಮೆ ಅಂಕಗಳನ್ನು ಒಟ್ಟು 15 ಮಹಾವಿದ್ಯಾಲಯಗಳು ಪಡೆದುಕೊಂಡಿರುತ್ತವೆ.

4. **ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗಳು**

| | | |
|---|---|---|
| 1. | ಹೊಸ ಕಾಲೇಜುಗಳು | – 05 |
| 2. | ಹೊಸ ವಿಷಯಗಳು | – 12 |
| 3. | ಹೆಚ್ಚುವರಿ ಪ್ರವೇಶ ಮಿತಿ | – 05 |
| 4. | ಹೆಸರು/ಟ್ರಸ್ಟ್ ಬದಲಾವಣೆಯ ಮಹಾವಿದ್ಯಾಲಯಗಳು | – ಹೆಸರು-01, ಟ್ರಸ್ಟ್-01 |
| 5. | ಸ್ಥಳಾಂತರಗೊಂಡ ಮಹಾವಿದ್ಯಾಲಯಗಳು | – 01 |
| 6. | Renewal Of Permanent affiliation | – 04 |
| 7. | Fresh Permanent affiliation | – 01 |

ಸರ್ಕಾರದ ಆದೇಶದನುಸಾರ ಸಂಯೋಜನೆಗೆ ಅರ್ಹತೆಯನ್ನು ಪಡೆಯಲು 45% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಇದರನುಸಾರ 183 ಕಾಲೇಜುಗಳಲ್ಲಿ 167 ಕಾಲೇಜುಗಳು ಅರ್ಹತೆಯನ್ನು ಪಡೆದಿರುತ್ತವೆ. ಮುಂದುವರೆದು 15 ಕಾಲೇಜುಗಳು 45% ಕ್ಕಿಂತ ಕಡಿಮೆ ಅಂಕಗಳನ್ನು ಪಡೆದು ಅನರ್ಹವಾಗಿರುತ್ತದೆ. ಸದರಿ ಕಾಲೇಜುಗಳಿಗೆ ವಿದ್ಯಾವಿಷಯಕ ಮತ್ತು ಸಿಂಡಿಕೇಟ್ ಅನುಮೋದನೆ ಮೇರೆಗೆ ಮರುತನಿಖೆಯನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ನಿರ್ಣಯ:**

45 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅರ್ಹತೆ ಹೊಂದಿರುವ ಮಹಾವಿದ್ಯಾಲಯಗಳ 2026-27ನೇ ಸಾಲಿನ ಸಂಯೋಜನೆಯನ್ನು ನೀಡಲು ಅನುಮೋದನೆಯನ್ನು ನೀಡಲಾಯಿತು. 45 ಕ್ಕಿಂತ ಕಡಿಮೆ ಅಂಕ ಪಡೆದ ಕಾಲೇಜುಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರನ್ವಯ ಅಧಿಸೂಚನೆಯನ್ನು ಹೊರಡಿಸಿ ಮರುತನಿಖೆ ಕೈಗೊಳ್ಳಲು ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (2) :** ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಕುರಿತು ಚರ್ಚೆ.

1. ವಿಶ್ವವಿದ್ಯಾನಿಲಯದ ಶಿಕ್ಷಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, C and R (Cadre and Recruitment Rules) ಕರಡು ಅನುಮೋದನೆ ಕುರಿತು.

**ಚರ್ಚೆ:**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವು 2020 ರಲ್ಲಿ ನೂತನವಾಗಿ ಸ್ಥಾಪಿತವಾಗಿದ್ದು, ಸದರಿ ವಿಶ್ವವಿದ್ಯಾಲಯ ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯದ C and R (Cadre and Recruitment Rules) ನಿಯಮಗಳಿಗನುಸಾರವಾಗಿ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಲಯಕ್ಕೆ ತನ್ನದೇ

ಆದ C and R (Cadre and Recruitment Rules) ನಿಯಮಗಳ ಅವಶ್ಯಕತೆ ಇದ್ದ ಪ್ರಯುಕ್ತ ಕರಡು ನಿಯಮಾವಳಿಗಳನ್ನು ತಯಾರಿಸಲಾಗಿದ್ದು ಸದರಿ ನಿಯಮಾವಳಿಗಳನ್ನು ವಿದ್ಯಾವಿಷಯಕ ಸಭೆಯಲ್ಲಿ ಅನುಮೋದನೆಯನ್ನು ಪಡೆದು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ತದನಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ ಎಂದು ಸಭೆಗೆ ಮಾನ್ಯ ಕುಲಸಚಿವರು ತಿಳಿಸಿದರು.

ನಿರ್ಣಯ:

ವಿಶ್ವವಿದ್ಯಾನಿಲಯದ ಶಿಕ್ಷಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, C and R (Cadre and Recruitment Rules) ಕುರಿತು ರಚಿಸಿದ ಪರಿನಿಯಮಾವಳಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

2. ಬಿಸಿಎ ಮತ್ತು ಬಿಬಿಎ ಕೋರ್ಸ್ ಗಳ ನಡೆಸುವ ಕುರಿತು.

ಚರ್ಚೆ :

ಸರ್ಕಾರಿ/ಅನುದಾನಿತ/ಅನುದಾನ ರಹಿತ ಕಾಲೇಜುಗಳು ಬಿಸಿಎ ಮತ್ತು ಬಿಬಿಎ ಕೋರ್ಸ್‌ಗಳನ್ನು ನಡೆಸಲು ವಿಶ್ವವಿದ್ಯಾನಿಲಯದ ಸಂಯೋಜನೆ/ಅನುಮತಿಯನ್ನು ಪಡೆಯುವುದರ ಜೊತೆಗೆ ಎಐಸಿಟಿ ಅನುಮೋದನೆಯನ್ನು ಪಡೆಯುವುದು ಅನಿರ್ವಾಯವಾಗಿರುತ್ತದೆ. ಆದರೆ ಕೆಲವು ಕಾಲೇಜುಗಳು ಎಐಸಿಟಿ ಯ ಅನುಮೋದನೆಯನ್ನು ಪಡೆಯದೆ ಕೇವಲ ವಿಶ್ವವಿದ್ಯಾನಿಲಯದ ಸಂಯೋಜನೆ/ಅನುಮತಿಯನ್ನು ಪಡೆದು ಕೋರ್ಸ್‌ಗಳನ್ನು ನಡೆಸುತ್ತಿವೆ ಎಂದು ಸಭೆಯಲ್ಲಿ ಕೆಲವು ಸದಸ್ಯರುಗಳು ಸಭೆಯ ಗಮನಕ್ಕೆ ತಂದರು ಈ ಕುರಿತಾಗಿ ಮಾನ್ಯ ಕುಲಸಚಿವರು ಕಾಲೇಜುಗಳು ಬಿಸಿಎ ಮತ್ತು ಬಿಬಿಎ ಕೋರ್ಸುಗಳನ್ನು ನಡೆಸಲು ಎಐಸಿಟಿ ಅನುಮೋದನೆಯು ಕಡ್ಡಾಯವಾಗಿರುತ್ತದೆ. ವಿಶ್ವವಿದ್ಯಾನಿಲಯವು ಸದರಿ ಕೋರ್ಸ್‌ಗಳಿಗೆ ಅನುಮೋಧನೆಯನ್ನು ನೀಡುವಾಗಿ ಎಐಸಿಟಿ ಅನುಮೋದನೆಯನ್ನು ಪರಿಶೀಲಿಸಿದ ನಂತರ ಅನುಮೋದನೆಯನ್ನು ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿದರು.

ನಿರ್ಣಯ:

ಎಐಸಿಟಿ ಅನುಮೋದನೆಯನ್ನು ಪರಿಶೀಲಿಸಿ ಅನುಮೋದನೆ ಇಲ್ಲದೇ ಇರುವ ಕಾಲೇಜುಗಳಲ್ಲಿ ಬಿಸಿಎ ಮತ್ತು ಬಿಬಿಎ ಕೋರ್ಸ್‌ಗಳನ್ನು 2026-27ನೇ ಸಾಲಿನಿಂದ ಎಐಸಿಟಿ ಅನುಮೋದನೆ ಪಡೆಯುವವರೆಗೆ ಸಂಲಗ್ನತೆಯನ್ನು ತಡೆಹಿಡಿಯಲು ಸಭೆಯು ನಿರ್ಣಯಿಸಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

22-1-26

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಅಧ್ಯಕ್ಷರು**
**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**